ಮತ್ತು ಈ ಪ್ರಶ್ನೆಯು ನನ್ನ ವೈಯಕ್ತಿಕ ದೃಷ್ಟಿಯಿಂದಲೂ, ನನ್ನ ವಿಚಾರದ ಹೊರಗಿರುವುದರಿಂದಲೂ ನಾನು ನನ್ನ ಮತವನ್ನು ಈ ಬಗ್ಗೆ ವ್ಯಕ್ತಮಾಡಲಾರೆ.

ನಾನು ನನ್ನ ಉಪವಾಸಕ್ಕೆ ಈ ಬಗೆಯಾಗಿ ಒಂದು ಸಂಕುಚಿತ ಕ್ಷೇತ್ರ ನಿರ್ಮಿಸಿದ್ದೇನೆ. ಅಸ್ಪೃಶ್ಯರ ಪ್ರಶ್ನೆ ಮುಖ್ಯತಃ ಧಾರ್ಮಿಕ ಪ್ರಶ್ನೆ. ಈ ವಿಷಯವನ್ನು ನಾನು ಆಜನ್ಮ ವಿಚಾರ ಮಾಡಿದ್ದರಿಂದ ಅದು ನನ್ನ ಪ್ರಶ್ನೆಯೆಂದೇ ನಾನು ತಿಳಿಯುವೆ; ಇದು ನನ್ನ ಪವಿತ್ರವಾದ ಇಡುಗಂಟು, ಅದರ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲಾರೆ.

ಜ್ಞಾನಪ್ರಾಪ್ತಿ ಹಾಗೂ ತಪವೆಂದು ಉಪವಾಸ ಮಾಡುವುದು ನಮ್ಮ ಪರಂಪರೆ. ಕ್ರಿಶ್ಚಿಯನ್ ಹಾಗೂ ಇಸ್ಲಾಂ ಧರ್ಮಗಳಲ್ಲಿಯೂ ಈ ರೂಢಿಯನ್ನು ನಾನು ಕಂಡಿದ್ದೇನೆ. ಹಿಂದೂ ಧರ್ಮದಲ್ಲಿ ಪ್ರಾಯಶ್ಚಿತ್ತಕ್ಕಾಗಿ ಹಾಗೂ ಆತ್ಮಶುದ್ಧಿಗಾಗಿ ಉಪವಾಸ ಕೈಕೊಂಡ ಅನೇಕ ಉದಾಹರಣೆಗಳುಂಟು. ಉಪವಾಸ ಮಾಡುವುದು ಕರ್ತವ್ಯವೆಂದು ನಿರ್ಣಯಿಸಿದ ನಂತರ ಅದೂ ಒಂದು ಮರ್ಯಾದೆಯ ಸಂಗತಿ ಎಂದು ತಿಳಿಯಬೇಕು. ನಾನು ಈ ವಿಷಯಕ್ಕೆ ಶಾಸ್ತ್ರೀಯ ಸ್ವರೂಪ ಕೊಟ್ಟಿದ್ದೇನೆ. ಆದುದರಿಂದ ಯಾರಾದರೂ ನನ್ನ ಮೇಲಿನ ಅಂಧವಿಶ್ವಾಸದಿಂದ ಇಲ್ಲವೆ, ನನ್ನ ವಿಷಯಕ್ಕಿದ್ದ ಹುಚ್ಚು ಸಹಾನುಭೂತಿಯ ಭಾವನೆಯಿಂದ ಬಲಿಬಿದ್ದು ನನ್ನ ಅನುಕರಣವನ್ನು ಮಾಡಬಾರದೆಂದು ಈ ವಿಷಯದಲ್ಲಿ ತಜ್ಞನೆಂಬ ದೃಷ್ಟಿಯಿಂದ ನನ್ನ ಮಿತ್ರರಿಗೂ, ನನ್ನಲ್ಲಿ ಸಹಾನುಭೂತಿಯುಳ್ಳವರಿಗೂ ಎಚ್ಚರಿಕೆಯನ್ನು ಕೊಡುತ್ತೇನೆ. ಈ ಎಲ್ಲ ಜನರು ನಿಸ್ವಾರ್ಥ ಬುದ್ಧಿಯಿಂದ ಕಾಯಕಷ್ಟವನ್ನು ಮಾಡಿ ಅಸ್ಪೃಶ್ಯರ ಸೇವೆಯನ್ನು ಮಾಡಲಿ. ಉಪವಾಸವನ್ನು ಕೈಕೊಳ್ಳುವ ಪ್ರಸಂಗವೇ ಬಂದಾಗ, ಅವರಿಗೆ ತಾನಾಗಿಯೇ ಸ್ಫೂರ್ತಿಯಾಗುವುದು.

ಯಾವುದೇ ವಿಶಿಷ್ಟ ವ್ಯಕ್ತಿಯ ವಿರುದ್ಧವಾಗಲೀ ಅಥವಾ ಮತ್ಸರದಿಂದಾಗಲಿ ಇಲ್ಲವೆ ಕ್ರೋಧದಿಂದಾಗಲಿ ಪ್ರೇರಿತವಾಗಿ ಈ ಉಪವಾಸ ಕೈಕೊಳ್ಳಲ್ಪಟ್ಟಿಲ್ಲ. ಶುದ್ಧ ಬುದ್ಧಿಯಿಂದ ಮಾಡಲ್ಪಟ್ಟಿದೆ. ಇದನ್ನೇ ನನಗೆ ಹೇಳಬೇಕಾಗಿದೆ. ನನ್ನ ದೃಷ್ಟಿಯಿಂದ ಅಹಿಂಸೆಯಲ್ಲಿಯ ಕೊನೆಯ ಅಸ್ತ್ರವಿದು; ಅಹಿಂಸೆಯ ಪ್ರಕಟ ಸ್ವರೂಪವಿದು. ಆದುದರಿಂದ ಈ ವಿವಾದದ ಪ್ರಸಂಗದಲ್ಲಿ ಯಾರು ನನ್ನ ಹಾಗೂ ನನ್ನ ಕಾರ್ಯದ ವಿರುದ್ಧ ಶತ್ರುತ್ವವನ್ನು ತಾಳಿರುವರೊ ಅವರ ವಿರುದ್ಧವಾಗಿ ಯಾರೇ ಆದರೂ ಹಿಂಸೆಯನ್ನು ಪ್ರಯೋಗಿಸಿದರೆ ಅವರು ನನ್ನ ಮರಣವನ್ನು ತೀವ್ರ ತರಲು ಕಾರಣರು ಎಂದು ನನ್ನ ಮತ. ಉಳಿದ ವಿಷಯದಲ್ಲಿರದಿದ್ದರೂ ಕೂಡ, ಈ ವಿಷಯದಲ್ಲಿ ನಾನು ಯಶಸ್ವಿಯಾಗಬೇಕೆಂದು ಅಪೇಕ್ಷಿಸುತ್ತಿದ್ದರೆ, ವಿರೋಧಕರೊಡನೆ ನಮ್ರತೆಯಿಂದಲೂ ಸಹಾನುಭೂತಿಯಿಂದಲೂ ನಡೆಯುವುದು ಅತ್ಯಂತ ಅವಶ್ಯವಿದೆ.

**–ಮೋಹನ್ ಕರಮಚಂದ ಗಾಂಧಿ**

**1947ರಲ್ಲಿ ಪ್ರಕಟಗೊಂಡ, ಸಿದ್ದವನಹಳ್ಳಿ ಕೃಷ್ಣಶರ್ಮರು ಸಂಗ್ರಹಿಸಿರುವ, 'ಗಾಂಧೀಜಿಯವರ ರಾಜಕೀಯ ಪತ್ರಗಳು' ಕೃತಿಯಿಂದ ಆಯ್ದ ಪತ್ರ.**

